## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ

## ಆಳಂದ

ಸಿ.ಸಿ, ನಂಬರ 44/2019 ಸಿ.ಡಬ್ಲೂ.1 ಪಿ.ಡಬ್ಲೂ.1

| | |
|---|---|
| ಹೆಸರು | ತಾಜಾಜಿ |
| ತಂದೆ/ಗಂಡ | ಯಾದವರಾವ |
| ವಯಸ್ಸು | 66 ವರ್ಷ |
| ಉದ್ಯೋಗ | ನಿವೃತ ಇಂಜಿನಿಯರ್ |
| ವಾಸಸ್ಥಳ | ಕೆರೂರ ತಾಃ ಬಾಲ್ಕಿ ಜಿಲ್ಲಾ. ಬಿದರ |

ದಿನಾಂಕ 12-02-2026

ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ಆರೋಪಿ ಪರಿಚಯ ಇರುತ್ತದೆ. ಚಾಸಾ 2 ರಿಂದ 5 ರವರ ಪರಿಚಯ ಇರುತ್ತಾರೆ. 2018 ರಲ್ಲಿ ನನಗೆ ಚುನಾವಣಾ ಸ್ಕಾವಾಯಿಡ್ ಅಂತಾ ನೇಮಕ ಮಾಡಿದ್ದರು. ಜನರು ಯಾರು ನಮಗೆ ಹಣ ಹಂಚುತಿದ್ದಾರೆ ಅಂತಾ ತಿಳಿಸಿದ ಮೇರೆಗೆ ಅಲ್ಲಿ ಹೋಗಿ ನೋಡಿದಾಗ ಜನರು ಗುಂಪಾಗಿ ನಿಂತಿದ್ದರು. ಪೋಲಿಸರು ನಮಗೆ ಹಣ ಹಂಚುತಿದ್ದ ಬಗ್ಗೆ ನಮಗೆ ತಿಳಿಸಿದರು. ಸದರಿ ಮಾಹಿತಿ ಮೇರೆಗೆ ನಾನು ವರದಿ ಸಲ್ಲಿಸಿರುತ್ತೇನೆ ಮತ್ತು ಹಣ ಹಂಚುವವರ ವಿರುದ್ದ ಸರಿಯಾದ ತನಿಖೆ ಮಾಡಬೇಕು ಅಂತಾ ಕೇಳಿಕೊಂಡಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1 (ಎ) ಅಂತಾ ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ವಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು. )**

ವಾಟೀ ಸವಾಲುಃ ಮಾನ್ಯ ಸ ಸ ಅ ವಕೀಲರಿಂದ:

ದಿಃ 07-05-2018 ರಂದು ಬೆ. 11.30 ಗಂಟೆಗೆ ಹಣ ಹಂಚುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ಆಳಂದ ಪಟ್ಟಣಕ್ಕೆ ಶ್ರೀ. ಬಿ.ಎಸ್. ಯಡಿಯೂರಪ್ಪ ಮಾಜಿ ಮುಖ್ಯಮಂತ್ರಿಗಳು ಪಕ್ಷದ ಅಭ್ಯರ್ಥಿ ಪರವಾಗಿ ಪ್ರಚಾರಕ್ಕೆ ಬಂದಿದ್ದರು ಎಂದರೆ ಸರಿ. ಆ ಸಮಯದಲ್ಲಿ ಪಕ್ಷದ ಕಾರ್ಯಕರ್ತರು ಪರವಾನಿಗೆ ಪಡೆಯದೇ ತಮ್ಮ ವಾಹನಗಳ ಮೇಲೆ ಪಕ್ಷದ ಧ್ವಜ ಹಚಿಕೊಂಡು ನೀತಿ ಸಂಹಿತೆ ಉಲ್ಲಂಘನೆ ಮಾಡಿ ಗಾಂಧಿ ಪೆಟ್ರೋಲ ಪಂಕ ಹತ್ತಿರ ಹಣ ಹಂಚುವ ಬಗ್ಗೆ ನಮಗೆ ಮಾಹಿತಿ ಬಂದಿರುತ್ತದೆ ಎಂದರೆ ಸರಿ. ಸ್ಥಳದಲ್ಲಿ 30-40 ವಾಹನಗಳು ಪರವಾನಿಗೆ ಇಲ್ಲದೇ ಧ್ವಜವನ್ನು ಹಚಿಕೊಂಡಿದ್ದರು ಎಂದರೆ ಸಾಕ್ಷಿಯು ವಾಹನಗಳು ಹೋಗಿ ಬಂದು ಮಾಡುತ್ತಿದ್ದವು ಎಂದು ನುಡಿಯುತ್ತಾರೆ. ಅಲ್ಲಿ ಒಬ್ಬ

ವ್ಯಕ್ತಿಯು ತನ್ನ ಕೊರಳಲ್ಲಿ ಬಿ.ಜೆ.ಪಿ ಪಕ್ಷದ ಧ್ವಜ ಉಳ್ಳ ಶಾಲು ಹಾಕಿಕೊಂಡು ಪೆಟ್ರೋಲ ಬಂಕಿಗೆ ಬರುವ ವಾಹನಗಳಿಗೆ ಪೆಟ್ರೋಲ್ ಹಾಕಿಸುತ್ತಿದ್ದ ಎಂದರೆ ನಾನು ಹೋದಾಗ ಇರಲಿಲ್ಲ ಅಂತಾ ನುಡಿಯುತ್ತಾರೆ. ಪ್ರತಿಯೊಂದು ವಾಹನಕ್ಕೆ ರೂ. 200/- ಹಂಚುತ್ತಿದ್ದರು ಅಂತಾ ಮಾಹಿತಿ ಬಂತು ಎಂದರೆ ಸರಿ. ಆದರೆ ಹಂಚುವುದನ್ನು ನಾನು ನೋಡಿಲ್ಲ. ದುಡ್ಡು ಹಂಚುವ ವ್ಯಕ್ತಿಯ ಹೆಸರು ಪ್ರಭುಲಿಂಗ ತಂದೆ ಭೀಮರಾವ ಪಾಟೀಲ ಸಾಃ ಜಳಕಿ ಬಿ.ಜೆ.ಪಿ ಕಾರ್ಯಕರ್ತ ಅಂತಾ ತಿಳಿಸಿರುತ್ತಾರೆ ಎಂದರೆ ಸಾಕ್ಷಿಯ ಪೋಲಿಸ್ ಠಾಣೆಗೆ ಹೋದ ಕಾರಣ ಅವರ ಹೆಸರಲ್ಲಿ ದೂರನ್ನು ನೀಡಿರುತ್ತೇನೆ ಅಂತಾ ನುಡಿಯುತ್ತಾರೆ. ದಿಃ 08-05-2018 ರಂದು 12.00 ರಿಂದ 1.00 ಗಂಟೆಯವರೆಗೆ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರಃ ಎಸ. ಎ. ಕೆ ವಕೀಲರಿಂದ:</u>

2018 ನೇ ಸಾಲಿನಲ್ಲಿ ಚುನಾವಣಾ ಸ್ಕ್ವಾಯಿಡ್ ಅಂತಾ ನನಗೆ ನೇಮಕ ಮಾಡಿದ ಬಗ್ಗೆ ನಾನು ಪೋಲಿಸರಿಗೆ ಯಾವುದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲ. ನನಗೆ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಸದರಿ ಕೆಲಸಕ್ಕೆ ನೇಮಕ ಮಾಡಿದ್ದರು ಅಂತಾ ನೇನಪು ಇರುವುದಿಲ್ಲ ನಾನು ಘಟನೆಯನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ನಾನು ಪೋಲಿಸರಿಗೆ ವಿಚಾರಣೆ ಮಾಡಲು ದೂರನ್ನು ಸಲ್ಲಿಸಿರುತ್ತೇನೆ. ನಾನು ನಿಪಿ. 1 ನ್ನು ದೂರನ್ನು ಓದಿರುತ್ತೇನೆ. ನಾನು ದೂರಿನಲ್ಲಿ ನಮೂದು ಮಾಡಿದ ವಿಷಯ ಸುಳ್ಳು ಇರುತ್ತದೆ ಎಂದರೆ ಸಾಕ್ಷಿಯು ಸದರಿ ಘಟನೆ ಬಗ್ಗೆ ಮಾಹಿತಿ ಬಂದ ಮೇರೆಗೆ ವಿಚಾರಣೆ ಮಾಡಿ ನಮೂದು ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ. ನಾನು ಆರೋಪಿಯು ಪೆಟ್ರೋಲ್ ಹಾಕಿ ದುಡ್ಡು ಹಂಚುತ್ತಿದ್ದದ್ದನ್ನು ಕಣ್ಣಾರೇ ನೋಡಿಲ್ಲ ಎಂದರೆ ಸರಿ. ನಾನು ಯಾವುದೇ ಘಟನೆಯನ್ನು ಕಣ್ಣಾರೆ ನೋಡದೇ ಇದ್ದರೂ ಸಹಿತಿ ವಿರೋದ ಪಕ್ಷದವರ ಹೇಳಿಕೆಯಂತೆ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನುಯಾವ ದಿನಾಂಕದಂದು ದೂರನ್ನು ಸಲ್ಲಿಸಿರುತ್ತೇನೆ ಅಂತಾ ನೆನಪು ಇರುವುದಿಲ್ಲ. ನಾನು ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲಾಃ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ